

# ಸ್ವಾಮಿ ವಿವೇಕಾನಂದರು ಮತ್ತು ಮಹಾತ್ಮಾ ಗಾಂಧಿ

ಭಾಗ ೧

ಪ್ರೊ .ಜಿ.ಎಸ್.ಜಯದೇವ

ನಮ್ಮ ದೇಶ ಕಂಡ ಇಬ್ಬರು ಅದ್ವಿತೀಯ ನಾಯಕರ ಚಿಂತನೆ, ಜೀವನ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅವರು ನೀಡಿದ ಕೊಡುಗೆ ಅನುಪಮವಾದುದು. ಸ್ವಾಮೀಜಿ ಹಾಗೂ ಗಾಂಧೀಜಿ ಅವರ ನಡುವಿನ ಸಾಮ್ಯತೆ ಹಾಗೂ ವೈಶಿಷ್ಟ್ಯಗಳನ್ನು ಕಾಣುವ ಒಂದು ಸಮರ್ಥ ಯತ್ನ ಇಲ್ಲಿದೆ. ೨೦೨೨ರಲ್ಲಿ ಬೆಂಗಳೂರು ರಾಮಕೃಷ್ಣ ಮಠದಲ್ಲಿ ನಡೆದ 'ಸ್ವಾಮಿ ವಿವೇಕಾನಂದ ಮತ್ತು ಭಾರತೀಯ ಸ್ವಾತಂತ್ರ್ಯ ಚಳುವಳಿ' ಎಂಬ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಲೇಖನವಿದು. ಲೇಖಕರು ಉತ್ತಮ ಚಿಂತಕರೂ, ವಾಗ್ಮಿಗಳೂ, ನುರಿತ ಬರಹಗಾರರೂ ಆಗಿದ್ದಾರೆ. ಚಾಮರಾಜನಗರದಲ್ಲಿ 'ದೀನಬಂಧು ಟ್ರಸ್ಟ್' ಎಂಬ ಅನಾಥಾಲಯವೊಂದನ್ನು ಕಟ್ಟಿ ಬೆಳೆಸುವ ಮೂಲಕ ಅವರು ಸಮಾಜಸೇವೆಯಲ್ಲೇ ತಮ್ಮನ್ನು ತಾವು ಪೂರ್ಣಾವಧಿ ತೊಡಗಿಸಿಕೊಂಡಿದ್ದಾರೆ. ಅವರು ಹಲವು ಗ್ರಂಥಗಳನ್ನೂ ರಚಿಸಿ ಪ್ರಕಟಿಸಿದ್ದಾರೆ.

ಭಾರತದ ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ನೇರವಾಗಿ ಹೋರಾಟಕ್ಕೆ ಇಳಿಯದಿದ್ದರೂ ಅವರ ನಂತರದ ಎಲ್ಲ ಹೋರಾಟಗಾರರನ್ನೂ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿಸಿದ್ದಾರೆ ಎಂದು ಹೇಳಬಹುದು. ಅರವಿಂದರಾಗಲಿ, ಸೋದರಿ ನಿವೇದಿತಾ ಅವರಾಗಲಿ ಅಥವಾ ಸುಭಾಸ್‌ಚಂದ್ರ ಬೋಸ್ ಅವರಾಗಲಿ ವಿವೇಕಾನಂದರ ಪ್ರಭಾವವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಬೆಸೆದಿದ್ದಾರೆ. ಸಮಾನತೆ ಮತ್ತು ಭ್ರಾತೃತ್ವದ ನೆಲೆಯನ್ನು ತಮ್ಮ ಪ್ರಖರ ವೈಚಾರಿಕತೆಯ ಮೂಲಕ ಗಟ್ಟಿಗೊಳಿಸಿ ಮುಂದಿನ ಎಲ್ಲ ಹೋರಾಟಗಳ ತಾತ್ತ್ವಿಕ ನೆಲೆಗಟ್ಟನ್ನು ಸ್ವಾಮಿ ವಿವೇಕಾನಂದರು ಒದಗಿಸಿದರು. ಸ್ವಾಮೀಜಿಯವರ ಪ್ರಭಾವ ಅಂತಾರಾಷ್ಟ್ರೀಯ ಮಟ್ಟದ್ದಾಗಿತ್ತೆಂಬುದನ್ನು ಇಂದು ಹೆಚ್ಚುಕಡಿಮೆ ಎಲ್ಲಾ ದೇಶಗಳೂ ಒಪ್ಪಿಕೊಳ್ಳುತ್ತವೆ. ಸ್ವಾಮೀಜಿಯವರ ನೂರೈವತ್ತನೆಯ ಜನ್ಮಶತಾಬ್ದಿಯ ಸಂದರ್ಭದಲ್ಲಿ ಬ್ರಿಟನ್ನಿನ ಸಂಸತ್ತು ಸ್ವಾಮಿ ವಿವೇಕಾನಂದರು ಜಗತ್ತಿಗೆ ನೀಡಿದ ಧಾರ್ಮಿಕ ಸಮನ್ವಯ ಸಂದೇಶವನ್ನು ಕೊಂಡಾಡಿದೆ. ಸಾರ್ವತ್ರಿಕ ಒಳಿತುಗಳು ಯಾವುದೋ ಒಂದು ಧರ್ಮದ ಗುತ್ತಿಗೆಯಲ್ಲ , ಅದು ಎಲ್ಲ ಧರ್ಮಗಳಲ್ಲಿಯೂ ಇದೆ ಎಂಬ ಅಂಶವನ್ನು ಸ್ವಾಮೀಜಿ ಜಗತ್ತಿಗೆ ಎತ್ತಿತೋರಿಸಿದರೆಂದು ಬ್ರಿಟನ್ನಿನ ಸಂಸತ್ತು ಗುರುತಿಸುತ್ತದೆ. ಅಮೆರಿಕ, ಯೂರೋಪ್‌ಗಳಲ್ಲಿ ಅವರು ಮಾಡಿದ ಭಾಷಣಗಳಿಂದಾಗಿ ಅಂತರ್‌ಧರ್ಮೀಯ ಸಂವಾದವು ಸಾಧ್ಯವಾಯಿತೆಂದು ಈ ಸಂಸತ್ ಗುರುತಿಸಿದೆ.

ಭಾರತವು ಬ್ರಿಟಿಷರ ಆಳ್ವಿಕೆಯಿಂದ ಬಿಡಿಸಿಕೊಂಡು ಸ್ವತಂತ್ರವಾಗಬೇಕೆಂಬುದು ಅವರ ನಿರೀಕ್ಷೆಯಾಗಿತ್ತು. ಅಷ್ಟೇ ಅಲ್ಲ, ಅದು ಸ್ವಾತಂತ್ರ್ಯವನ್ನು ಗಳಿಸುತ್ತದೆಯೆಂಬ ಗಾಢವಾದ ನಂಬಿಕೆಯೂ ಅವರಿಗಿತ್ತು. ನಲುವತ್ತು ಸಾವಿರ ಬ್ರಿಟನ್ನರು ಕೋಟ್ಯಂತರ ಭಾರತೀಯರನ್ನು ಆಳುತ್ತಿರುವುದಾದರೂ ಹೇಗೆ? ಇದು ನಮ್ಮ ಜನರ ಇಚ್ಛಾಶಕ್ತಿಯ ಕೊರತೆ ಎನ್ನುತ್ತಾರೆ ಸ್ವಾಮೀಜಿ. ಭಾರತವು ಸ್ವಾತಂತ್ರ್ಯ ಗಳಿಸುವುದಕ್ಕಿಂತಲೂ ನಮ್ಮ ಜನ ಇಚ್ಛಾಶಕ್ತಿಯನ್ನು, ಸಂಘಟನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಅವರಿಗೆ ದೊಡ್ಡ ಸವಾಲಾಗಿತ್ತು. ಗಾಂಧೀಜಿಯವರಾಗಲಿ, ವಿವೇಕಾನಂದರಾಗಲಿ ಭಾರತೀಯರು ತಲೆತಲಾಂತರಗಳಿಂದ ಹಾಸುಹೊಕ್ಕಾಗಿರುವ ಗುಲಾಮಗಿರಿ ಮನೋಧರ್ಮದಿಂದ ಪಾರಾಗಿ ಸ್ವಾತಂತ್ರ್ಯಕ್ಕೆ ಯೋಗ್ಯರಾಗಬೇಕು ಎಂಬ ದೃಷ್ಟಿಯಿಂದ ಶ್ರಮಿಸಿದರು.

ಈ ದೇಶದ ಆತ್ಮವೋ ಎಂಬಂತೆ ಶ್ರಮಿಸಿದ ಸ್ವಾಮಿ ವಿವೇಕಾನಂದರನ್ನು ಮತ್ತು ಗಾಂಧೀಜಿಯವರನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲು ಭಾರತದ ಬಹುತ್ವ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕು.ಈ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾದ ಭಾರತದ ಚಾರಿತ್ರಿಕ ಆಚಾರ ವಿಚಾರಗಳನ್ನು, ಚಿಂತನಧಾರೆಗಳನ್ನು ಮನಸ್ಸಿನಲ್ಲಿ ಭಾವಿಸಿಕೊಳ್ಳಲೇಬೇಕು. ಪರಸ್ಪರ ವೈರುಧ್ಯವಿರುವ ನಮ್ಮ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನಧಾರೆಗಳು ಸಮಾನಾಂತರವಾಗಿ ವಿಕಾಸವಾಗುತ್ತಲೇ ಇವೆ. ನಮ್ಮ ಆರು ದರ್ಶನಗಳಲ್ಲಿ ನಾಲ್ಕು ದರ್ಶನಗಳು ದೇವರನ್ನು ಅವಲಂಬಿಸದೆ ಲೋಕಸಂಬಂಧಗಳನ್ನು ವಿವರಿಸಲು ಯತ್ನಿಸುತ್ತವೆ. ಚಾರ್ವಾಕರನ್ನು ಸುಡುವ ಪ್ರಯತ್ನಗಳ ನಡುವೆಯೇ ಇದನ್ನೂ ಒಂದು ದರ್ಶನ ಎಂದು ಕರೆಯುವಷ್ಟು ಉದಾರತೆ ನಮ್ಮ ಭಾರತೀಯ ಮನಸ್ಸಿಗೆ ಇದೆ. ಇವುಗಳ ನಡುವೆ ಹೋರಾಟಗಳು, ಪರಸ್ಪರ ಹತ್ತಿಕ್ಕುವ ಪ್ರಯತ್ನಗಳು ನಡೆದಿವೆಯಾದರೂ ಅಸಂಖ್ಯಾತ ವೈವಿಧ್ಯಮಯ ಚಿಂತನಧಾರೆಗಳು ಸಮಾನಾಂತರವಾಗಿ ಹರಿಯುತ್ತಿರುವ ಕಾರಣ ಪರಸ್ಪರ ಸಹಿಷ್ಣುತೆಯ ಮನೋಧರ್ಮವೂ ನಮ್ಮ ನಡುವೆ ಬೆಳೆದು ಬಂದಿದೆ. ಹಾಗಾಗಿ ಸ್ವಾಮಿ ವಿವೇಕಾನಂದರು ತಮ್ಮ ಅಮೆರಿಕಾ ಭಾಷಣಗಳಲ್ಲಿ 'ಜಗತ್ತಿಗೆ ಸ್ವೀಕಾರ – ಸಹಿಷ್ಣುತೆಗಳೆರಡನ್ನೂ ಬೋಧಿಸಿದ ನಾಡೊಂದರಿಂದ ಬಂದವ

ನೆಂಬ ಹೆಮ್ಮೆ ನನ್ನದು' ಎಂದು ಹೇಳಲು ಸಾಧ್ಯವಾಯಿತು. ಭಾರತ ದೇಶ ನಾಲ್ಕು ಪ್ರಮುಖ ಜಾಗತಿಕ ಧರ್ಮಗಳ ಉಗಮ ಸ್ಥಾನ. ಅಷ್ಟೇ ಅಲ್ಲದೆ ಕ್ರೈಸ್ತ, ಇಸ್ಲಾಂ, ಪಾರ್ಸಿ ಧರ್ಮಗಳು ನಮ್ಮ ನೆಲವನ್ನು ಹೊರಗಿನಿಂದ ಪ್ರವೇಶಿಸಿದವು. ಭಾರತದ ಬಹುತ್ವ ಸಂಸ್ಕೃತಿ ಈ ಧರ್ಮಗಳನ್ನು ಒಳಗೊಂಡು ತನ್ನಲ್ಲಿ ಒಂದಾಗಿ ಮಾಡಿಕೊಂಡಿತು. ನಮ್ಮ ದೇಶದ ಬಹುತ್ವ ಸಂಸ್ಕೃತಿಗೂ ನಮ್ಮ ಜನಗಳ ಸಹಿಷ್ಣುತೆ ಹಾಗೂ ಅಹಿಂಸಾ ಮನೋಧರ್ಮಕ್ಕೂ ನೇರವಾದ ಸಂಬಂಧವಿದೆ. ಸಾವಿರಾರು ವರ್ಷಗಳಿಂದಲೂ ವಿಭಿನ್ನ ಆಚಾರ ವಿಚಾರಗಳು ಭಾರತ ಉಪಖಂಡದಲ್ಲಿ ವಾಸಿಸುವ ಜನಗಳ ದಿನನಿತ್ಯದ ಬದುಕಿನ ವಾಸ್ತವವಾಗಿದೆ. ಹಾಗಾಗಿ ಈ ವಿಭಿನ್ನ ನಂಬಿಕೆಯ ಜನಗಳು ಪರಸ್ಪರ ಕೂಡಿ ಬಾಳುವುದು ಅನಿವಾರ್ಯ. ಈ ಜನಗಳು ಪರಸ್ಪರರನ್ನು ಸಹಿಸಿಕೊಳ್ಳುವ ಮನೋಧರ್ಮವನ್ನು ಬೆಳೆಸಿಕೊಳ್ಳುವುದೂ ಅನಿವಾರ್ಯ. ಬಹುತ್ವ ಸಂಸ್ಕೃತಿಯ ಫಲವಾಗಿ ನಮ್ಮದಲ್ಲದ ನಂಬಿಕೆ-ವಿಚಾರಗಳುಳ್ಳ ಜನರನ್ನೂ ಒಳಗೊಂಡು ಭಿನ್ನತೆಯಲ್ಲೂ ಬೆರೆಯಬಹುದು ಎಂಬುದನ್ನು ತೋರಿಸುವ ಮನೋಧರ್ಮ ನಮ್ಮ ಜನಗಳಲ್ಲಿ ಸಹಜವಾಗಿ ಬೆಳೆದುಬಂದಿದೆ. ವ್ಯಕ್ತಿಯ ವರ್ತನೆ ಅನೇಕ ಕಾಲದ ಅಭ್ಯಾಸದಿಂದ ಉಂಟಾಗುವಂತೆ ಒಂದು ಜನಸಮೂಹದ ವರ್ತನೆಯೂ ಪ್ರಧಾನ ಸಾಂಸ್ಕೃತಿಕ ಆಕರಗಳಿಂದ ಪ್ರೇರಣೆಗಳನ್ನು ಪಡೆಯುತ್ತವೆ.

ಸ್ವಾಮಿ ವಿವೇಕಾನಂದರು ಮತ್ತು ಗಾಂಧೀಜಿ ನಮ್ಮ ದೇಶದ ಬಹುತ್ವ ಸಂಸ್ಕೃತಿಯ ಆಧಾರದ ಮೇಲೆ ಸ್ವಾತಂತ್ರ್ಯಾನಂತರ ರೂಪುಗೊಳ್ಳಬೇಕಾದ ಭಾರತದ ರಾಷ್ಟ್ರೀಯತೆಯ ಚೌಕಟ್ಟನ್ನು ಕಟ್ಟಿಕೊಟ್ಟರು. ಇದು ಬುದ್ಧಿಪೂರ್ವಕವಾಗಿ ಲೆಕ್ಕಹಾಕಿ ರೂಪಿಸಿದ ಉಪಯುಕ್ತವಾದ ಚೌಕಟ್ಟು ಎಂದು ಭಾವಿಸಲಾಗದು. ಭಾರತದ ಬಹುತ್ವಕ್ಕೆ ಸ್ಪಂದಿಸಿದ ಬದುಕು ರೂಪಿಸಿದ ರಾಷ್ಟ್ರೀಯತೆ ಇದು. ಈ 'ಬಹುತ್ವ' ಸ್ವಾತಂತ್ರ್ಯ ಚಳವಳಿಯ ನೇತಾರರೆಲ್ಲರನ್ನೂ ಪ್ರಭಾವಿಸಿತು. ಸ್ವಾಮೀಜಿಯವರಿಂದ ಸ್ಫೂರ್ತಿ ಪಡೆದ ಸುಭಾಸ್ ಚಂದ್ರ ಬೋಸ್ ಅವರ ಈ ಮಾತನ್ನು ಗಮನಿಸಿ: ''ಪ್ರಸ್ತುತ ಸ್ವಾತಂತ್ರ್ಯ ಚಳುವಳಿಯ ಬುನಾದಿಗೆ ಮೂಲ ಪ್ರೇರಣೆ ದೊರೆತಿದ್ದು ಸ್ವಾಮೀಜಿಯವರಿಂದಲೇ. ಭಾರತವು ಸ್ವತಂತ್ರವಾಗಬೇಕಾದರೆ ಆಗ ಅದು ವಿಶಿಷ್ಟವಾಗಿ ಹಿಂದೂಧರ್ಮದ ನಾಡಾಗಲಿ, ಇಸ್ಲಾಂ ಧರ್ಮದ ನಾಡಾಗಲಿ ಆಗಲು ಸಾಧ್ಯವಿಲ್ಲ. ಅದು ರಾಷ್ಟ್ರೀಯತೆಯ ಆದರ್ಶದಿಂದ ಸ್ಫೂರ್ತಿಯನ್ನು ಪಡೆದ ವಿಭಿನ್ನ ಧಾರ್ಮಿಕ ಸಮುದಾಯಗಳ ಒಂದು ಏಕತೆಯ ನಾಡಾಗಬೇಕು. ಹೀಗಾಗಬೇಕಾದರೆ ಭಾರತೀಯರು ರಾಮಕೃಷ್ಣ-ವಿವೇಕಾನಂದರ ಧರ್ಮಸಮನ್ವಯದ ಸಂಹಿತೆಯನ್ನು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳಬೇಕು.'' ಸ್ವಾಮಿ ವಿವೇಕಾನಂದರ ಪ್ರೇರಣೆಗಳನ್ನು ಗಾಂಧೀಜಿಯವರೂ ಸ್ವೀಕರಿಸಿದ್ದಾರೆ. ''ಸ್ವಾಮಿ ವಿವೇಕಾನಂದರ ಕೃತಿಗಳನ್ನು ಓದಿದ ಮೇಲೆ ಭಾರತದ ಮೇಲಿನ ತಮ್ಮ ಪ್ರೀತಿ ನೂರ್ಮಡಿಯಾಯಿತು'' ಎನ್ನುತ್ತಾರೆ ಗಾಂಧೀಜಿ.

ಭಾರತೀಯರ ಧಾರ್ಮಿಕ ಬಹುರೂಪಗಳನ್ನು ಮೇಲು ಕೀಳೆಂದು ಮೌಲ್ಯಮಾಪನ ಮಾಡಿ ವರ್ಗೀಕರಿಸುವುದು ಸುಲಭ. ಧಾರ್ಮಿಕ, ಸಾಂಸ್ಕೃತಿಕ ಬಹುರೂಪಗಳ ಮೂಲ ಆಕರಗಳಿಗೂ ಮತ್ತು ಅತ್ಯುನ್ನತ ಆಧ್ಯಾತ್ಮಿಕ ದರ್ಶನವೊಂದು ತನ್ನ ಸಾಫಲ್ಯವನ್ನು, ಅನನ್ಯತೆಯನ್ನು, ಪರಿಪೂರ್ಣತೆಯನ್ನು ಪಡೆಯುವುದಕ್ಕೂ ಇರುವ ಸಂಬಂಧವನ್ನು ಕೇವಲ ತರ್ಕದಿಂದ ಗ್ರಹಿಸಲು ಸಾಧ್ಯವಿಲ್ಲ. ಅದನ್ನು ಶ್ರೀರಾಮಕೃಷ್ಣ ಪರಮಹಂಸರಂತಹ ಅನುಭಾವಿಗಳ ಜೀವನವನ್ನು ನೋಡಿಯೇ ತಿಳಿಯಬೇಕು. ರಾಮಕೃಷ್ಣರು ಎಲ್ಲ ಮತಗಳೂ ಸತ್ಯಕ್ಕೆ ಇರುವ ಬೇರೆಬೇರೆ ಮಾರ್ಗಗಳು, ಎಷ್ಟು ಮತಗಳಿವೆಯೋ ಅಷ್ಟೂ ಪಥಗಳೇ ಎಂದವರು. ಈ ಸಮಷ್ಟಿ ದೃಷ್ಟಿಯನ್ನು ವಿಶದಪಡಿಸಲು ಅವರು ಬೇಲದ ಹಣ್ಣಿನ ಉದಾಹರಣೆಯನ್ನು ಕೊಡುತ್ತಾರೆ. ಬೇಲದ ಹಣ್ಣಿನಲ್ಲಿ ತಿರುಳು ಮಾತ್ರ ಸಾರವಾದದ್ದು ಎಂದು ಪರಿಗಣಿಸಿ ಬೀಜ ಕರಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೆ ಹಣ್ಣಿನ ನಿಜವಾದ ತೂಕ ನಮಗೆ ತಿಳಿಯುವುದಿಲ್ಲ. ತಿರುಳು ಹೇಗೆ ಹಣ್ಣಿಗೆ ಸೇರಿದ್ದೋ ಹಾಗೆಯೇ ಬೀಜ ಕರಟಗಳೂ ಕೂಡ ಹಣ್ಣಿಗೆ ಸೇರಿದ್ದು ಎನ್ನುತ್ತಾರೆ ಪರಮಹಂಸರು. ಒಳಗೊಳ್ಳುವಿಕೆಯ ಈ ತತ್ತ್ವ ಅದ್ವೈತ ದರ್ಶನದ ಬುನಾದಿ. ಯಾವ ಏಕತೆಯ ಧರ್ಮದೆಡೆಗೆ ಮನುಕುಲವನ್ನು ಕೊಂಡೊಯ್ಯಬೇಕೆಂದು ವಿವೇಕಾನಂದರು ಜೀವನವಿಡೀ ಪ್ರತಿಪಾದನೆ ಮಾಡಿದರೋ ಆ ತತ್ತ್ವಕ್ಕೆ ಆಧಾರವಾಗಿರುವುದೇ ಈ ಒಳಗೊಳ್ಳುವಿಕೆ. ನಾವು ಮನುಕುಲವನ್ನು ಎಲ್ಲಿ ಗೀತೆ, ಖುರಾನ್, ಬೈಬಲ್‌ಗಳಿಲ್ಲವೋ ಅಲ್ಲಿಗೆ, ಆ ಏಕತೆಯೆಡೆಗೆ ಮುನ್ನಡೆಸಬೇಕು. ಆದರೆ ಇದನ್ನು ನಾವು ಇವುಗಳ ಸಾಮರಸ್ಯದಿಂದಲೇ ಸಾಧಿಸಬೇಕು ಎಂದು ವಿವೇಕಾನಂದರು ಹೇಳಿದರು. ಈ ಸಂದರ್ಭದಲ್ಲಿ ಗಾಂಧೀಜಿಯವರ ಮಾತನ್ನು ಗಮನಿಸಿ: ''I plead for the broadest toleration and I am working to that end… I do not expect India of my dreams to develop one religion i.e., to be wholly Hindu or wholly Christian or wholly Musalman, but I want it to be wholly tolerant''. ಧರ್ಮಸಮನ್ವಯದ ರಾಷ್ಟ್ರೀಯ ಚೌಕಟ್ಟನ್ನು ವಿವೇಕಾನಂದ-ಗಾಂಧಿ ತಮ್ಮದೇ ಮಾತುಗಳಲ್ಲಿ ಹೀಗೆ ಸಮರ್ಥಿಸುತ್ತಾ ಬಂದಿದ್ದಾರೆ. ವಿವೇಕಾನಂದರ ವಿಚಾರಗಳನ್ನು ಗಾಂಧೀಜಿಯವರು ಓದಿದ್ದರೂ ಅವುಗಳನ್ನು ಅನುಕರಣೆ ಮಾಡಿದರು ಎಂದು ಭಾವಿಸಲಾಗುವುದಿಲ್ಲ. ಅವರು ತಾನೊಬ್ಬ ಸತ್ಯಶೋಧಕ ಎಂದು ಹೇಳಿಕೊಳ್ಳುತ್ತ ಸ್ಥಾಪಿತ ಆಚಾರ ವಿಚಾರಗಳೆಲ್ಲವನ್ನು ಮರುವಿಮರ್ಶೆಗೆ, ಶೋಧನೆಗೆ ಒಳಪಡಿಸಿ ತಮ್ಮ ಪ್ರಾಮಾಣಿಕ ಮನಸ್ಸಿಗೆ ಯಾವುದು ಸತ್ಯವೆಂದು ಕಂಡುಬರುತ್ತದೆಯೋ ಅದನ್ನು ಮಾತ್ರ ಒಪ್ಪಿಕೊಳ್ಳುತ್ತಿದ್ದರು. ಈ ದೃಷ್ಟಿಯಿಂದ ನೋಡಿದರೆ ಧಾರ್ಮಿಕ ಬಹುತ್ವ ಮತ್ತು ಧರ್ಮಸಮನ್ವಯ ನಮ್ಮ ರಾಷ್ಟ್ರೀಯತೆಯ ಸ್ವಾಭಾವಿಕ ಅಥವಾ ಅಂತರ್ಗತ ಗುಣವಾಗಿತ್ತು. ಆದ್ದರಿಂದಲೇ ಈ ಇಬ್ಬರೂ ಮಹನೀಯರು ಈ ರಾಷ್ಟ್ರೀಯ ಗುಣವನ್ನು ಎತ್ತಿಹಿಡಿದರು.

ಸ್ವಾತಂತ್ರ್ಯಾನಂತರದ ನಮ್ಮ ಸಂವಿಧಾನವೂ ಈ ಬಹುತ್ವ ಸಂಸ್ಕೃತಿಯನ್ನು ಎತ್ತಿಹಿಡಿಯಿತು. ನಮ್ಮ ರಾಷ್ಟ್ರೀಯತೆಯ ಧರ್ಮನಿರಪೇಕ್ಷತೆಗೆ ಭದ್ರವಾದ ಬುನಾದಿಯನ್ನು ಹಾಕಿದವರಲ್ಲಿ ಸ್ವಾಮಿ ವಿವೇಕಾನಂದರೇ ಅಗ್ರಗಣ್ಯರು. ಅವರಿಗೆ ಹಿಂದೂ ಧರ್ಮದ ಮೇಲೆ ಅಭಿಮಾನವಿತ್ತು; ಆದರೆ ಅವರು ಮತಾಂಧತೆಯನ್ನು ಖಂಡಿಸಿದರು. ಈ ದೇಶದ ಜನರು ಮೇಲುಗೈ ಸಾಧಿಸಲು ತಮ್ಮ ನರನಾಡಿಗಳಲ್ಲಿ ಹರಿಯುತ್ತಿರುವ ಆಧ್ಯಾತ್ಮಿಕತೆಯನ್ನು ಆಧರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಅದಕ್ಕೆ ಪೂರಕವಾಗಬಲ್ಲ ಅಂಶಗಳನ್ನು ಹಿಂದೂಧರ್ಮದಲ್ಲಿ ಗುರುತಿಸಿ ಅದನ್ನು ಬಲಗೊಳಿಸಲು ಪ್ರಯತ್ನಿಸಿದರು. ''ನೀವು ಇತರರ ಧರ್ಮವನ್ನು ದ್ವೇಷಿಸುವ ಮೂಲಕ ಮಾತ್ರ ನಿಮ್ಮ ಧರ್ಮವನ್ನು ಪ್ರೀತಿಸಬಲ್ಲಿರಿ'' ಎಂದು ಅವರು ಖಾರವಾಗಿ ಹೇಳಿದ್ದನ್ನು ನೆನೆದರೆ ಅವರ 'ಹಿಂದೂ' ಅಭಿಮಾನದ ವಿಸ್ತಾರ ವನ್ನು ಅರ್ಥಮಾಡಿಕೊಳ್ಳಬಹುದು. ಭಾರತದ ಆಧ್ಯಾತ್ಮಿಕತೆ ಯನ್ನು ಸ್ವಾಮೀಜಿಯವರು ಎಲ್ಲ ಧರ್ಮಗಳ, ಎಲ್ಲ ಜನಾಂಗಗಳ ಧಾರ್ಮಿಕತೆಯನ್ನು ಹೆಚ್ಚಿಸುವ ಶಕ್ತಿಯಾಗಿ ಪರಿಭಾವಿಸಿದರು. ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯವೂ 'ಹಿಂದು' ಪದವನ್ನು ಒಂದು ಜೀವನವಿಧಾನ ಎಂಬುದಾಗಿ ಮಾತ್ರ ಗುರುತಿಸುತ್ತದೆ (ಬಾಳ ಠಾಕ್ರೆ ಮತ್ತು ಪ್ರಭಾಕರ ಕುಂಟೆ ನಡುವಿನ ದಾವೆ, ಡಿಸೆಂಬರ್ ೧೧, ೧೯೯೫). ಸರ್ವೇಪಲ್ಲಿ ರಾಧಾಕೃಷ್ಣನ್ ಅವರೂ ಸಹ 'ಹಿಂದು' ಪದ ಭೌಗೋಳಿಕ ಸರಹದ್ದಿಗೆ ಅನ್ವಯವಾಗುತ್ತದೆಯೇ ಹೊರತು ಅದಕ್ಕೆ ಧಾರ್ಮಿಕ ಆಯಾಮಗಳಿಲ್ಲ ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. 'ಹಿಂದೂ' ಶಬ್ದವನ್ನು ಜೀವನವಿಧಾನವೆಂದು ಒಪ್ಪಿಕೊಂಡ ಬಳಿಕ ವಿಶಿಷ್ಟ ಆಧ್ಯಾತ್ಮಿಕತೆಯೊಂದು ಆ ಜೀವನ ವಿಧಾನದ ಭಾಗವಾಗಿದ್ದರೆ ಅದನ್ನು ಗುರುತಿಸಲು ಏಕೆ ಹಿಂಜರಿಯಬೇಕು? ಕೇವಲ ಬೌದ್ಧಿಕ ಶಹಭಾಷ್‌ಗಿರಿಗೆ ಜೋತು ಬಿದ್ದ ಆಳವಿಲ್ಲದ ಪಂಡಿತರು ಹಾಗೆ ಮಾಡಬಹುದು. ಆದರೆ ಸ್ವಾಮಿ ವಿವೇಕಾನಂದರು ಭಾರತದ ಆಧ್ಯಾತ್ಮಿಕ ಅಸ್ಮಿತೆಯನ್ನು ಯಾವ ಹಿಂಜರಿಕೆಯೂ ಇಲ್ಲದೆ ಗುರುತಿಸಿದರು, ಜೊತೆಗೆ ತಮ್ಮ ಈ ನಿಲುವು ಮತಾಂಧತೆಯ ಅಪವ್ಯಾಖ್ಯಾನಕ್ಕೆ ಗುರಿಯಾಗದಂತೆ ಅದರ ವೈಶಾಲ್ಯವನ್ನು ಸ್ಪಷ್ಟಪಡಿಸಿದರು. ಇದೇ ಆಧ್ಯಾತ್ಮಿಕ ತತ್ತ್ವಗಳ ಮೂಲಕ ಮಲಗಿದ್ದ ಭಾರತವನ್ನು ಎಚ್ಚರಿಸುವ ಕೆಲಸ ಮಾಡುವುದಾಗಿ ನಿರ್ಧರಿಸಿದರು, ಭಾರತೀಯರನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಜರ್ಮನ್ ರಾಷ್ಟ್ರೀಯತೆ ರೂಪುಗೊಂಡ ಸಂದರ್ಭದಲ್ಲಿ ಜರ್ಮನ್‌ತನವನ್ನು ಆಧರಿಸಿ ತಾವು ಒಂದು ಪ್ರದೇಶದ ಮೂಲನಿವಾಸಿಗಳು ಎಂಬ ಸಾಂಸ್ಕೃತಿಕ ಅಸ್ಮಿತೆಯ ಮೂಲಕ ಒಗ್ಗೂಡಲು ಮಾಡಿದ ಪ್ರಯತ್ನಕ್ಕೂ (Deutschtum) ಭಾರತೀಯರು ತಮ್ಮ ಅಂತರ್ಗತ ಆಧ್ಯಾತ್ಮಿಕ ಪ್ರವೃತ್ತಿಗನುಗುಣವಾಗಿ ಒಂದುಗೂಡುವುದಕ್ಕೂ ಇರುವ ವ್ಯತ್ಯಾಸವನ್ನು ಇಲ್ಲಿ ಗಮನಿಸಬೇಕು. ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಹರಿದು ಹಂಚಿಹೋಗಿದ್ದ ಜರ್ಮನರು ತಮ್ಮ ಅಸ್ಮಿತೆಯನ್ನು ಪುನರ್‌ಸ್ಥಾಪಿಸಲು ತಮ್ಮ ಪ್ರಾದೇಶಿಕ ಅಸ್ಮಿತೆಯನ್ನು ಆಧರಿಸಿದರು. ಭಾರತೀಯರು ಭೌತಿಕವಾಗಿ ಚದುರಿಹೋಗಿರಲಿಲ್ಲ. ಆದರೆ ಚಾರಿತ್ರಿಕ ಕಾರಣಗಳಿಂದ ತಾವು ಒಂದು ದೇಶದ ಜನರಾಗಿ ಬದುಕಬೇಕಾದ ಬಹುಸಂಸ್ಕೃತಿಗಳ ಜನ-ಸಮುಚ್ಚಯ ಎಂಬುದನ್ನು ಮರೆತಿದ್ದರು. ಸ್ವಾಮಿ ವಿವೇಕಾನಂದರು ಮತ್ತು ಗಾಂಧೀಜಿಯವರು ನಮ್ಮ ದೇಶದ ಆಧ್ಯಾತ್ಮಿಕ ಅಸ್ಮಿತೆಯನ್ನು ಮತ್ತು ಅದಕ್ಕೆ ಪೂರಕವಾಗಬಹುದಾದ ಧಾರ್ಮಿಕತೆಯನ್ನು ಆಧರಿಸಿ ನವಭಾರತದ ರಾಷ್ಟ್ರೀಯತೆಗೆ ನಾಂದಿ ಹಾಡಿದರು. ಈ ಧಾರ್ಮಿಕತೆಯೆಂಬುದು ಹಿಂದು, ಕ್ರೈಸ್ತ, ಇಸ್ಲಾಮ್, ಬೌದ್ಧ ಹೀಗೆ ಯಾವುದು ಬೇಕಾದರೂ ಆಗಿರಬಹುದು; ಈ ಧಾರ್ಮಿಕ ವೈವಿಧ್ಯಗಳಲ್ಲಿ ಅಂತರ್ಗತವಾಗಿರುವ, ಏಕತೆಯನ್ನು ಆಧರಿಸಿದ ಆಧ್ಯಾತ್ಮಿಕತೆಗೆ ಧಾರ್ಮಿಕ ಭಿನ್ನತೆಗಳು ಪ್ರತಿಬಂಧಕವಾಗುವುದಿಲ್ಲ. ನಿಜವಾದ ಆಧ್ಯಾತ್ಮಿಕತೆಯನ್ನು ಧರ್ಮಗಳಿಂದ ಬೇರ್ಪಡಿಸುವ ಈ ಉದಾತ್ತ ನಿಲುವು ಭಾರತದ ಧರ್ಮಗಳ ವೈಶಿಷ್ಟ್ಯ. ಬಹುತ್ವಸಂಸ್ಕೃತಿಯಿಂದ ಒಡಮೂಡಿದ ಮನೋಧರ್ಮವೇ ಇದಕ್ಕೆ ಇರುವ ಆಧಾರ. ಈ ಅರ್ಥವ್ಯಾಪ್ತಿಯನ್ನು ಗಾಂಧೀಜಿ ಹಾಗೂ ವಿವೇಕಾನಂದರ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಗಾಂಧೀಜಿಯವರು 'ಧರ್ಮ ಎನ್ನುವುದು ತನ್ನ ಅತ್ಯುನ್ನತವಾದ ಅರ್ಥದಲ್ಲಿ ಹಿಂದು, ಕ್ರೈಸ್ತ, ಇಸ್ಲಾಮ್ ಮೊದಲಾದ ಎಲ್ಲ ಧರ್ಮಗಳನ್ನೂ ಒಳಗೊಳ್ಳುತ್ತದೆ' ಎನ್ನುತ್ತಾರೆ. ಅಲ್ಲದೆ ಈ ಧಾರ್ಮಿಕ ವಿಶಿಷ್ಟತೆಯನ್ನು ಕುರಿತು, 'ಭಾರತದ ನಿರ್ದಿಷ್ಟ ಕಾರ್ಯವು ಉಳಿದ ರಾಷ್ಟ್ರಗಳಿಗಿಂತಲೂ ಭಿನ್ನವಾಗಿದೆಯೆಂದು ನನ್ನ ಎಣಿಕೆ. ಜಗತ್ತಿನ ಧಾರ್ಮಿಕ ಸಾರ್ವಭೌಮತ್ವಕ್ಕಾಗಿ ಭಾರತವು ಅಣಿಗೊಳಿಸಲ್ಪಟ್ಟಿದೆ' ಎಂದೂ ಅಭಿಪ್ರಾಯಪಡುತ್ತಾರೆ. ಭಾರತದ ಬೆನ್ನೆಲುಬು ಧರ್ಮ; ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಭಾರತಕ್ಕೆ ಇಡೀ ಜಗತ್ತಿನ ಆಧ್ಯಾತ್ಮಿಕ ಜವಾಬ್ದಾರಿಯೊಂದಿದೆ ಎಂದು ಗಾಂಧೀಜಿ ಭಾವಿಸುತ್ತಿದ್ದರು. ಈ ಸಂದರ್ಭದಲ್ಲಿ ವಿವೇಕಾನಂದರ ಮಾತುಗಳನ್ನು ಗಮನಿಸೋಣ:

''This oneness is the rationale of all ethics and all spirituality. Europe wants it today just as much as our down trodden masses do, and this great principle is even now unconsciously forming the basis of all the latest political and social aspirations that are coming up in England, in Germany, in France and in Africa. ''

ಏಕತೆಯನ್ನು ಆಧರಿಸಿದ ಆದರ್ಶದ ಕಾಲ ಬರುತ್ತದೆಯೋ ಇಲ್ಲವೋ ಆದರೆ ಆ ಕನಸಿಗಾಗಿ ನಾವು ಶ್ರಮಿಸಲೇಬೇಕು ಎನ್ನುತ್ತಾರೆ ಅವರು. ಆ ಕನಸು ಯಾವುದು? ಅವರ ಪ್ರಕಾರ ಅದು ''dream of ages — the harmony of nations, an ideal world''.

ಸ್ವಾಮಿ ವಿವೇಕಾನಂದರಾಗಲಿ ಗಾಂಧೀಜಿಯವರಾಗಲಿ ಭಾರತದ ಬಹುಸಾಂಸ್ಕೃತಿಕ ಪರಂಪರೆಯನ್ನು ದೌರ್ಬಲ್ಯದ ಲಕ್ಷಣವೆಂದು ಪರಿಗಣಿಸಲಿಲ್ಲ ; ಅದು ನಮ್ಮ ಶಕ್ತಿವಿಶೇಷತೆ ಎಂದು

ಗುರುತಿಸಿದರು. ವೈವಿಧ್ಯಮಯವಾದ ಭೌಗೋಳಿಕ ಲಕ್ಷಣಗಳುಳ್ಳ ನಮ್ಮ ದೇಶದಲ್ಲಿ, ವೈವಿಧ್ಯಮಯವಾದ ಹವಾಮಾನ, ವ್ಯವಸಾಯದ ಬೆಳೆಗಳು, ಕೃಷಿಪದ್ಧತಿಗಳು ಆಚರಣೆಯಲ್ಲಿವೆ. ಜೀವವೈವಿಧ್ಯಕ್ಕೆ ಅನುಗುಣವಾಗಿ ವೈವಿಧ್ಯಮಯವಾದ ಆಹಾರ ಪದ್ಧತಿ, ಸಂಸ್ಕೃತಿ ಆಚರಣೆಗಳು, ಅನೇಕ ಪ್ರಧಾನ ಸಂಸ್ಕೃತಿ ಧಾರೆಗಳ ನಡುವೆ ಸಾವಿರಾರು ಉಪಸಂಸ್ಕೃತಿಗಳು ನಮ್ಮ ವೈವಿಧ್ಯಕ್ಕೆ ಕೊಡುಗೆ ನೀಡಿವೆ. ಸಾವಿರಾರು ವರ್ಷಗಳ ಪರ್ಯಂತ ಬೆಳೆದು ಬಂದಿರುವ ಸಂಸ್ಕೃತಿಯೊಂದು ತನ್ನದಲ್ಲವೆಂಬ ಒಂದೇ ಕಾರಣಕ್ಕೆ ಮಹಾಶಯನೊಬ್ಬ ಅದರ ಮೌಲ್ಯಮಾಪನ ಮಾಡಬಹುದೆಂಬ ಉದ್ಧಟತನ ತೋರಬಾರದು. ಸ್ವಾಮೀಜಿಯವರ ಪ್ರಕಾರ ಯಾವುದೇ ಸಂಸ್ಕೃತಿಯಾಗಲಿ, ಧರ್ಮವಾಗಲಿ, ಇನ್ನಿತರ ಯಾವುದೇ ಧರ್ಮಕ್ಕಿಂತಲೂ ಸಂಸ್ಕೃತಿಗಿಂತಲೂ ಉತ್ತಮವಾಗಿರುವುದು ಸಾಧ್ಯವೇ ಇಲ್ಲ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಧರ್ಮ ಮತ್ತು ಸಂಸ್ಕೃತಿ ಜಗತ್ತಿನ ಇತರೆಲ್ಲಾ ಸಂಸ್ಕೃತಿ ಧರ್ಮಗಳಿಗಿಂತ ಶ್ರೇಷ್ಠ ಎಂದು ಭಾವಿಸುತ್ತವೆ. ಈ ಸಾಂಸ್ಕೃತಿಕ ದುರಭಿಮಾನಕ್ಕೆ ಮೂಲ ಕಾರಣ ಹೆಗೆಲ್‌ನ ಚಿಂತನೆಗಳು ಎಂಬುದನ್ನು ಜೆ.ಜೆ. ಕ್ಲಾರ್ಕ್ ಮಹಾಶಯ ಗುರುತಿಸುತ್ತಾನೆ. ಈ ವಿಷಯವಾಗಿ ಗಾಂಧೀಜಿಯವರ ಅಭಿಪ್ರಾಯವನ್ನು ಗಮನಿಸಿ:

''ಯಾವುದೇ ಭೂಖಂಡವಾಗಲಿ ಜನಾಂಗವಾಗಲಿ ಜಾಣತನವೆಂಬುದು ತನಗೇ ಮೀಸಲಾಗಿದೆಯೆಂದು ಹೇಳಬಾರದು; ನಾನು ವಿರೋಧಿಸುವುದು ಪಾಶ್ಚಾತ್ಯ ನಾಗರಿಕತೆಯನ್ನಲ್ಲ ; ಆದರೆ ವಿಚಾರರಹಿತವಾದ ಅದರ ಅನುಕರಣೆಯನ್ನು. ಏಕೆಂದರೆ ಏಷ್ಯಾದ ಜನರು ಪಶ್ಚಿಮದಿಂದ ಬಂದುದನ್ನೇ ಅನುಕರಣ ಮಾಡಲು ಮಾತ್ರ ಯೋಗ್ಯರು ಎಂಬ ತಿಳಿವಳಿಕೆ ಈ ಅನುಕರಣೆಗೆ ಆಧಾರವಾಗಿದೆ.''

ನಮ್ಮ ಸಂಸ್ಕೃತಿಯಲ್ಲಿ ಕಂಡುಬರುವ ವೈರುಧ್ಯಮಯ ಆಚಾರವಿಚಾರ, ನಂಬಿಕೆಗಳ ಜೊತೆಜೊತೆಗೆ ಮನುಷ್ಯನ ಮನಸ್ಸು ಗ್ರಹಿಸಬಹುದಾದ ಉನ್ನತವೂ ಉದಾತ್ತವೂ ಆದ ಸತ್ಯಗಳನ್ನೂ ತನ್ನ ಸಂಸ್ಕೃತಿಯ ಭಾಗವಾಗಿಯೇ ಉಳಿಸಿಕೊಂಡು ಬಂದಿರುವುದನ್ನು ವಿವೇಕಾನಂದರು ಗುರುತಿಸಿದರು. ಈ ಮನೋಧರ್ಮಕ್ಕೆ ಆಧಾರವಾಗಿರುವ ಸಹಿಷ್ಣುತೆ ಮತ್ತು ಸಾಮರಸ್ಯಗಳನ್ನು ಒಂದು ಶಕ್ತಿಯಾಗಿ ಕಂಡರು. ಆದರೆ ಆ ಕಾಲದಲ್ಲಿ ಪ್ರಖ್ಯಾತರಾದ ರಾಜಾರಾಮ್ ಮೋಹನ ರಾಯ್, ಕೇಶವ ಚಂದ್ರ ಸೇನ್ ಮೊದಲಾದವರು ನಮ್ಮ ಧರ್ಮಗಳಲ್ಲಿ ಹಾಸುಹೊಕ್ಕಾಗಿರುವ ವಿಗ್ರಹಾರಾಧನೆಯ ಜೊತೆ ಹೆಣೆದುಕೊಂಡಿದ್ದ ಒರಟು ಆಚರಣೆಗಳನ್ನು ಹೀಗಳೆಯುವ ಪಾಶ್ಚಾತ್ಯ ಪಂಡಿತರ ಟೀಕೆಗಳಿಗೆ ಹೆದರಿ, ಹಿಂದೂಧರ್ಮದ ಸೀಮಿತ ಸ್ವರೂಪವಾದ ನಿರಾಕಾರ-ಅದ್ವೈತಗಳನ್ನು ಮಾತ್ರ ಎತ್ತಿಹಿಡಿದು, ಇದೇ ನಮ್ಮ ಸಂಸ್ಕೃತಿಯ ಸಾರ, ಉಳಿದೆಲ್ಲವೂ ತಿರಸ್ಕಾರಾರ್ಹ ಎಂಬ ನಿಲುವಿನ ಮೂಲಕ ಪಾಶ್ಚಾತ್ಯರ ಮನ್ನಣೆ ಗಳಿಸಬಯಸಿದರು. ನಮ್ಮ ಸಂಸ್ಕೃತಿಯ ಪರ್ಯಾಯ ರೂಪಗಳನ್ನು, ವೈವಿಧ್ಯಗಳನ್ನು ಸಮರ್ಥಿಸಲಾರದೆ ಹೋದರು. ಆದರೆ ಈ ವೈವಿಧ್ಯದ ಸಮಗ್ರ ಒಳಗೊಳ್ಳುವಿಕೆ ಪರಿಪೂರ್ಣ ವೇದಾಂತದರ್ಶನಕ್ಕೆ ವಿರೋಧವಲ್ಲ ಎಂಬುದನ್ನು ರಾಮಕೃಷ್ಣ ಪರಮಹಂಸರು ತಮ್ಮ ಸಾಧನೆಯ ಮೂಲಕ ತೋರಿಸಿದರು. ಅದ್ವೈತ ದರ್ಶನದ 'ಒಳಗೊಳ್ಳುವಿಕೆ' ಎಂಬುದು ಆಚಾರ-ವಿಚಾರ ವಿಧಿ-ವಿಧಾನಗಳ ಮೌಲ್ಯೀಕರಣವನ್ನು ನಿರಾಕರಿಸುತ್ತದೆ. ಅವುಗಳನ್ನು ವಿಕಾಸದ ಹಂತಗಳು ಎಂದು ಪರಿಗಣಿಸಿ ಅವು ಪ್ರತಿಯೊಂದೂ ಮುಂದಕ್ಕೆ ಏಕತೆಯೆಡೆಗೆ ಅಡಿಯಿಡುವ ಪ್ರಗತಿಶೀಲ ನಡಿಗೆಯ ಹೆಜ್ಜೆಗಳು ಎಂದು ಭಾವಿಸುತ್ತದೆ. ವಿವೇಕಾನಂದರ ಭಾಷಣಗಳ ತುಂಬ ಈ ಏಕತೆಯ ದರ್ಶನದಿಂದ ಸ್ಫೂರ್ತವಾದ ಧ್ವನಿ ಅನುರಣಿಸುತ್ತದೆ. ವಿವೇಕಾನಂದರ ಕನಸಿನ ಭಾರತ ಈ ಅದ್ವೈತ ದರ್ಶನದ ವಿಶಾಲ ಭಿತ್ತಿಯ ಮೇಲೆ ಚಿತ್ರಿಸಿದ ವೈವಿಧ್ಯಮಯ ವರ್ಣಚಿತ್ರ. ತಂದೆ, ತಾಯಿ ಮತ್ತು ಗುರುಗಳನ್ನು 'ನಾರಾಯಣ'ನೆಂದು ಕಾಣಬೇಕು ಎಂಬುದು ನಮ್ಮ ಪರಂಪರೆಯ ನಂಬಿಕೆ. ಆದರೆ ವಿವೇಕಾನಂದರು ಹೇಳುತ್ತಾರೆ - ದರಿದ್ರ ನಾರಾಯಣ, ದೀನ ನಾರಾಯಣ, ದುರ್ಬಲ ನಾರಾಯಣ! ಪ್ರತಿಯೊಂದು ಜೀವಿಯೂ ಮೂಲದಲ್ಲಿ ದಿವ್ಯಾತ್ಮನೇ. ಈ ಅದ್ವೈತ ದೃಷ್ಟಿ ಭಿನ್ನತೆಗಳ ನಡುವೆ ಸಮಾನತೆ ಮತ್ತು ಭ್ರಾತೃತ್ವಗಳಿಗೆ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಭದ್ರ ಬುನಾದಿಯನ್ನು ಹಾಕುತ್ತದೆ. ಅರ್ಥಪೂರ್ಣವಾದ ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಅದರ ಸುಭದ್ರತೆ ವೈವಿಧ್ಯಪೂರ್ಣ ಪರಿಸರದಲ್ಲಿ ಮಾತ್ರ ಸಾಧ್ಯ. ಏಕರೂಪ ಸಂಸ್ಕೃತಿ, ಏಕರೂಪ ಧರ್ಮ, ಹೀಗೆ ಎಲ್ಲದರಲ್ಲೂ ಏಕರೂಪತೆಯಿರುವ ಒಂದು ಸಮಾಜದಲ್ಲಿ ಪ್ರಜಾಸತ್ತಾತ್ಮಕತೆಗೆ ಯಾವ ಅರ್ಥವಿದೆ? ಇಂತಹ ನೀರಸ ಸಮಾಜ ವಿಕಾಸಕ್ಕೆ ವಿಮುಖವಾಗುತ್ತದೆ, ಬಹುತ್ವದಲ್ಲಿ ಮಾತ್ರ ಸಾಧ್ಯವಾಗುವ ಪರಸ್ಪರತೆಯಿಂದಲೇ ವಿಕಾಸ ಸಾಧ್ಯ, ವಿಕಾಸವೇ ಜೀವನ. ಗಾಂಧೀಜಿಯವರು ಜೀವನದುದ್ದಕ್ಕೂ ಕೈಗೊಂಡ ಯಾವುದೇ ಕೆಲಸವೂ 'ವಿವಿಧತೆಯಲ್ಲಿ ಏಕತೆ' (Unity in Diversity) ತತ್ತ್ವವನ್ನು ಆಧರಿಸಿದೆ. ಗಾಂಧೀಜಿಯವರು ಈ ತತ್ತ್ವವನ್ನು ಗುರುತಿಸುವ ಬಗೆ ಹೇಗಿದೆ ನೋಡಿ: ''ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೇ ಆತನನ್ನು ಕಂಡು ಅದರಲ್ಲಿಯೇ ಒಂದಾಗಿರುವುದು. ಸರ್ವರ ಸೇವೆಯೊಂದೇ ಇದಕ್ಕಿರುವ ಸಾಧನ. ನಾನು ಈ ಸರ್ವದ ಒಂದು ಅಂಶ. ಇತರರನ್ನು ಉಳಿದು ನಾನೊಬ್ಬನೇ ಆತನನ್ನು ಪಡೆಯಲಾರೆ.'' ಗಾಂಧೀಜಿಯವರು ವಿವೇಕಾನಂದರ ನುಡಿಗಳನ್ನೇ ಪುನರುಚ್ಚರಿಸಿದ್ದಾರೆಯೋ ಎಂಬಷ್ಟು ಹೋಲಿಕೆಯಿರುವ ಗಾಂಧೀಜಿಯವರ ಮತ್ತೊಂದು ಹೇಳಿಕೆಯನ್ನು ನೋಡಿ: ''ನಾನು ಸೋದರಭಾವ ಅಥವಾ ತಾದಾತ್ಮ್ಯವನ್ನು ಸಾಧಿಸಲೆಳಸುವುದು ಕೇವಲ ಮಾನವಜೀವಿಗಳೊಂದಿಗೆ ಮಾತ್ರವಲ್ಲ , ಸಮಸ್ತ ಜೀವರಾಶಿಗಳೊಂದಿಗೆ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೊಂದಿಗೆ ಕೂಡ.'' ವಿವೇಕಾನಂದರ ''ಅಮೀಬದಿಂದ ಹಿಡಿದು ಮನುಷ್ಯನವರೆಗೆ ಇರುವುದೆಲ್ಲವೂ ನಾನೇ'' ಎಂಬ ಹೇಳಿಕೆಯ ಹಿಂದೆಯೂ ಇದೇ ಏಕತೆಯ ತತ್ತ್ವ ಅಡಗಿದೆ. ಸ್ವಾಮಿ ವಿವೇಕಾನಂದರು ಅದ್ವೈತ ತತ್ತ್ವವನ್ನು ಎತ್ತಿಹಿಡಿದು ಅದರ ಆಧಾರದಮೇಲೆ ಜೀವರ ಸೇವೆಯನ್ನು

ಬೋಧಿಸಿದರು. ಹಾಗೆಂದು ಅವರಿಗೆ ಇತರ ಮತಗಳ ಕುರಿತು ಅಗೌರವ ಇತ್ತೆಂದು ಭಾವಿಸಲಾಗದು. ಸಾಂಖ್ಯದರ್ಶನದ ಹಿರಿಮೆಯ ಬಗ್ಗೆ ಗೌರವದಿಂದ ಮಾತನಾಡುತ್ತಾರೆ. ಆದರೆ ಅದ್ವೈತಕ್ಕೆ ಹೋಲಿಸಿದರೆ ಇದು ಕುಸುರಿ ಕೆಲಸ ಬಾಕಿ ಇರುವ ಕಟ್ಟಡದಂತೆ ಎನ್ನುತ್ತಾರೆ. ಬೌದ್ಧ ಧರ್ಮ ಚಾರಿತ್ರಿಕವಾಗಿ ಮುಖ್ಯವಾದದ್ದೇ ಹೊರತು ತತ್ತ್ವಶಾಸ್ತ್ರೀಯವಾಗಿ ಅಲ್ಲ ಎಂಬುದು ಅವರ ಅಭಿಮತ. ಹಾಗೆಯೆ ಇತರ ಪ್ರಬುದ್ಧ ಅಥವಾ ಅಪ್ರಬುದ್ಧ ಆಚಾರವಿಚಾರಗಳು ಅದ್ವೈತದ ಪೂರ್ಣದರ್ಶನಕ್ಕೆ ಪೂರಕವಾಗಬಲ್ಲ ಕೆಳಗಿನ ಸೋಪಾನಗಳು ಎಂದು ಅವರು ಪರಿಗಣಿಸುತ್ತಾರೆ. ಅವರು ಸಮಸ್ತ ಲೋಕಸಂಬಂಧಗಳನ್ನೂ ಅದ್ವೈತದ ಭಿತ್ತಿಯ ಮೇಲೆಯೇ ಚಿತ್ರಿಸುತ್ತಾರೆ.

ವಿಭಿನ್ನ ಧರ್ಮ, ನಂಬಿಕೆ, ಆಚಾರವಿಚಾರಗಳನ್ನು ಸಹಾನುಭೂತಿಯಿಂದ ಕಂಡರೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯನ್ನು ಸ್ವಾಮಿ ವಿವೇಕಾನಂದರು ತೀವ್ರವಾಗಿ ಖಂಡಿಸದೆ ಇರಲಿಲ್ಲ. ಅವರ ಈ ಹೇಳಿಕೆಯನ್ನು ನೋಡಿ: ''ಮನುಕುಲದ ಘನತೆಯನ್ನು ಹಿಂದೂ ಧರ್ಮವು ಎತ್ತಿಹಿಡಿದಷ್ಟು ಎತ್ತರಕ್ಕೆ, ಈ ಭೂಮಿಯ ಮತ್ತಾವ ಧರ್ಮವೂ ಎತ್ತಿಹಿಡಿಯಲಿಲ್ಲ ; ಹಾಗೆಯೇ ಬಡವರ, ಕೆಳವರ್ಗದ ಜನರ ಕುತ್ತಿಗೆಯನ್ನು ಹಿಂದೂಧರ್ಮ ಮೆಟ್ಟಿ ತುಳಿದಷ್ಟು ಜಗತ್ತಿನ ಮತ್ತಾವ ಧರ್ಮವೂ ತುಳಿಯಲಿಲ್ಲ.'' ನಮ್ಮ ಸಮಾಜದ ಅಸ್ಪೃಶ್ಯತೆಯನ್ನು, ಅನೇಕ ಬಗೆಯ ಶೋಷಣೆಗಳನ್ನು ಸ್ವಾಮೀಜಿಯವರು ಖಂಡಿಸಿದರು. ಎಷ್ಟು ಮತಗಳಿವೆಯೋ ಅಷ್ಟು ಪಥಗಳೇ ಎಂಬ ಪರಮಹಂಸರ ಅನುಭಾವದ ದರ್ಶನವನ್ನು ಎತ್ತಿಹಿಡಿದರು. ಗಾಂಧೀಜಿಯವರೂ ಈ ಎಲ್ಲ ಸಾಮಾಜಿಕ ಶಾಪಗಳ ನಿರ್ಮೂಲನೆಗೆ ಸತತವಾಗಿ ಶ್ರಮಿಸಿದರು.

ಭಾರತದ ವಿಶಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ಬದುಕಿ ಬಾಳಿ ಅಹಿಂಸೆಯ ಅಸ್ತ್ರ ಬಳಸಿದ ಗಾಂಧೀಜಿಯವರ ಭಾರತೀಯತೆಯ ಗ್ರಹಿಕೆ, ಯಾವ ಅದ್ವೈತ ತತ್ತ್ವವನ್ನು ಸ್ವಾಮಿ ವಿವೇಕಾನಂದರು ಆಧರಿಸಿದ್ದರೋ ಅದಕ್ಕಿಂತ ಭಿನ್ನವಾಗಿರಲಿಲ್ಲ. ಗಾಂಧೀಜಿಯವರ ಅಹಿಂಸೆ ಮತ್ತು ಸತ್ಯಕ್ಕೆ ತಾತ್ತ್ವಿಕ ನೆಲೆಗಟ್ಟನ್ನು ಒದಗಿಸಿದ್ದು ಇದೇ ಅದ್ವೈತ. ಸ್ವಾಮಿ ವಿವೇಕಾನಂದರಂತೆ ಗಾಂಧೀಜಿಯವರಿಗೆ ಅದ್ವೈತಾನುಭೂತಿ ಎಂದರೆ ವಿಶಿಷ್ಟ ಅದ್ವೈತಾನುಭವ ದೊರಕಿರಲಿಕ್ಕಿಲ್ಲ ಎಂದಿಟ್ಟುಕೊಂಡರೂ ಅವರ ಮಾತು ಕೃತಿಗಳು ಅದ್ವೈತದ ಚೌಕಟ್ಟನ್ನು ಬಿಟ್ಟು ಎಂದೂ ಹೊರಗೆ ಹೋಗಲಿಲ್ಲ. ಅವರ ಈ ಹೇಳಿಕೆಗಳನ್ನು ಗಮನಿಸಿ:

'By a long process of prayerful discipline I have ceased for over forty years to hate anybody. All men are brothers and no human being should be a stranger to another. The welfare of all, Sarvodaya, should be our aim. God is the common bond that unites all human beings.'

'For me patriotism is the same as humanity. I am patriotic because I am human and humane. I will not hurt England or Germany to serve India.'

ಈ ತಾತ್ತ್ವಿಕ ನೆಲೆಗಟ್ಟಿನಿಂದಲೇ ಭಾರತದ ಪುನರ್‌ನಿರ್ಮಾಣಕ್ಕಾಗಿ ಈ ಇಬ್ಬರೂ ಮಹನೀಯರು ಶ್ರಮಿಸಿದರು. ಸ್ವಾಮಿ ವಿವೇಕಾನಂದರ ನುಡಿ,'I consider that the great national sin is the neglect of the masses and that is one of the causes of our downfall' ಎಂಬುದು ಭಾರತದ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟ ಮೊದಲ ಮೆಟ್ಟಿಲು ಎನ್ನಬೇಕು. 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ಅಲೌಕಿಕ ಅಧ್ಯಾತ್ಮವಿದ್ಯೆಯ ವಾರಸುದಾರರಾದಾಕ್ಷಣ ಸಹಜೀವಗಳ ನೋವಿಗೆ ಸ್ಪಂದಿಸಬೇಕಾದ ಜವಾಬ್ದಾರಿಯಿಂದ ಬಿಡುಗಡೆಯಾಗಬಹುದು ಎಂಬ ಅನುಕೂಲ ಅದ್ವೈತ ಸಿದ್ಧಾಂತವನ್ನು ನಮ್ಮ ದೇಶದ ಪುರೋಹಿತಶಾಹಿ ಸೃಷ್ಟಿಸಿತ್ತು. ಕರ್ಮಸಿದ್ಧಾಂತದ ನೇತ್ಯಾತ್ಮಕ ವ್ಯಾಖ್ಯಾನವನ್ನು ಆಧರಿಸಿದ್ದ ಈ ಬಗೆಯ ಚಿಂತನೆಗಳನ್ನು ಸ್ವಾಮೀಜಿ ಕಟುವಾಗಿ ಟೀಕೆ ಮಾಡಿದರು. ಸ್ವಾತಂತ್ರ್ಯಪೂರ್ವದಲ್ಲಿ ಪ್ರಾರಂಭವಾದ ರಾಮಕೃಷ್ಣ-ವಿವೇಕಾನಂದ ಆಧ್ಯಾತ್ಮಿಕ ಆಂದೋಲನ ಮಾಯೆಯನ್ನು ದಯೆಯಿಂದ ಸ್ಥಳಾಂತರಿಸಿ ಅದ್ವೈತಾನುಭೂತಿಯು ವ್ಯಕ್ತದಿಂದ ಅವ್ಯಕ್ತದವರೆಗೆ, ಎಲ್ಲ ಸ್ತರಗಳಲ್ಲೂ ಅನ್ವಯವಾಗುವ, ಮನುಷ್ಯನ ನೋವಿಗೆ ಸ್ಪಂದಿಸುವ ಒಳಗೊಳ್ಳುವಿಕೆ ಎಂದು ಅರ್ಥೈಸಿತು. ಈ ಅರ್ಥವಂತಿಕೆಯ ಫಲವೇ ಸ್ವಾಮಿ ವಿವೇಕಾನಂದರ ಈ ಹೇಳಿಕೆ: 'Remember that nation lives in cottages. But alas nobody ever did any thing for them... can you give them back their lost individuality without making them lose their innate spirituality ?' ಮತ್ತೆ ಹೇಳುತ್ತಾರೆ: 'The real nation who live in cottage have forgotten their man-hood, their individuality.' ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಶ್ರೀಸಾಮಾನ್ಯನನ್ನು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡಲಾಗಿದೆ, ದಬ್ಬಾಳಿಕೆಯಿಂದ ಅವರ ಮೌಢ್ಯವನ್ನೇ ಬಂಡವಾಳಮಾಡಿಕೊಂಡು ಬಡವರ ರಕ್ತವನ್ನು ಹೀರಲಾಗಿದೆ. ಈ ಚಾರಿತ್ರಿಕ ಅನ್ಯಾಯಕ್ಕೆ ವಿವೇಕಾನಂದರು ಮಿಡಿಯುತ್ತಾರೆ: 'These common people have suffered oppression for thousands of years - suffered it without murmur, and as a result have got wonderful fortitude. They have suffered eternal misery, which has given them unflinching vitality.' ವಿವೇಕಾನಂದರೇ ಹುಟ್ಟುಹಾಕಿದ ರಾಮಕೃಷ್ಣ ಮಿಷನ್ ಅವರೇ ನೀಡಿದ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** - 'ತನ್ನ ಮುಕ್ತಿಗಾಗಿ ಮತ್ತು ಜಗತ್ತಿನ ಹಿತಕ್ಕಾಗಿ' ಎಂಬ ಧ್ಯೇಯವಾಕ್ಯವನ್ನು ಅನುಷ್ಠಾನಕ್ಕೆ ತರುವ ಮೂಲಕ ಸಂಸ್ಥೆಗಳು ವಿವೇಕಾನಂದರ ವಾಣಿಯನ್ನು ಕಾರ್ಯಗತ ಮಾಡುತ್ತಿವೆ ಮತ್ತು ಅವರ ಮಾತುಗಳಿಂದ ಸ್ಫೂರ್ತಿಯನ್ನು ಪಡೆಯುತ್ತಲೇ ಇವೆ.

*(ಮುಂದಿನ ಸಂಚಿಕೆಗೆ)*